ಲೇಬಲ್ ಹಾಕಿ ಮಾರುತ್ತಿದ್ದಾರೆ. ಈ ತರಹ ಮಾರುವುದರಿಂದ ಪ್ಯಾರಲಲ್ ಆರ್ಗನೈಸೇಷನ್ ಶುರುವಾಗಿ ಪ್ರಾಡಕ್ಟ್ ಕಾಸ್ಟ್ ಜಾಸ್ತಿಯಾಗುವುದಿಲ್ಲವೇ ? ಕ್ರೋಂ ಟ್ಯಾನಿಂಗ್‌ನಿಂದ ಲೆದರ್ ತೆಗೆದುಕೊಂಡು ಲಿಡ್ಕರ್‌ಗೆ ಕೊಡುವುದು, ಅದೇ ಕಂಪನಿ ಬೇರೆ ಇದೇ ಕಂಪನಿ ಬೇರೆ. ಲಿಡ್ಕರ್‌ನಲ್ಲಿ ಮಾಡುವುದನ್ನು ವಿಶ್ವ ಎಂದು ಹಾಕಿ ಮತ್ತೆ ಅದನ್ನು ಮಾರುವುದು, ಈ ತರಹ ಆರ್ಗನೈಸೇಷನ್ ಕ್ರಿಯೇಟ್ ಮಾಡಿಕೊಂಡು ಹೋದರೆ ಪ್ರಾಡಕ್ಟ್ ಕಾಸ್ಟ್ ಜಾಸ್ತಿಯಾಗುತ್ತದೆ. ಆದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದು ಅವರ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ನಜೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷೆಣಿಯವರೆ, ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿ ನನ್ನ ಕ್ಷೇತ್ರದಲ್ಲಿದೆ. ಅದು ಯಾವ ಸ್ಥಿತಿಯಲ್ಲಿದೆಯೆಂದು ಪ್ರತ್ಯೇಕವಾದ ಪ್ರಶ್ನೆಯನ್ನು ಸನ್ಮಾನ್ಯ ಸದಸ್ಯರು ಕೇಳಿದರೆ ಅದರ ಬಗ್ಗೆ ಉತ್ತರ ಕೊಡುತ್ತೇನೆ. ಈಗ ವಿಶ್ವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ನಿಜ. ಯಾವುದೇ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಮೊದಲು ಮಾನ್ಯ ಸದಸ್ಯರು ಅಲ್ಲಿ ಹೋಗಿ ಭೇಟಿ ಮಾಡಿ ನೋಡಿ ಬಂದು ಪ್ರಸ್ತಾಪ ಮಾಡಿದ್ದರೆ ನಿಜವಾಗಿಯೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೆ. ಸದನದಲ್ಲಿ ಲಿಡ್‌ಕರ್ ಲೇಬಲ್ ಹಾಕಿ ವಿಶ್ವ ಎಂದು ಮಾರುತ್ತಿದ್ದಾರೆ ಎಂದು ಹೇಳುವುದು ರೆಸ್ಪಾನ್ಸಿಬಲ್ ಮೆಂಬರ್‌ಗೆ ಚನ್ನಾಗಿ ಕಾಣುವುದಿಲ್ಲ. ಕಾರಣ, ನಾವು ಈ ಒಂದು ಯೋಜನೆ ಹಾಕಿಕೊಂಡಮೇಲೆ ಪ್ರತಿಯೊಂದು ಕ್ಷೇತ್ರದಲ್ಲಿ ಹೋಗಿ ನೋಡಿದ್ದೇವೆ. ಎಲ್ಲಾ ಪ್ರೊಡಕ್ಷನ್ ಸೆಂಟರ್ಸ್‌ಗೆ ಹೋಗಿ ನೋಡಿದ್ದೇವೆ. ನಾನು ಮಾತ್ರ ಅಲ್ಲ, ಪ್ರಧಾನ ಮಂತ್ರಿಯವರ ಕಾರ್ಯದರ್ಶಿ,ಸ್ಕಾಲ್ ಸ್ಕೇಲ್ ಇಂಡಸ್ಟ್ರೀಸ್, ಅವರು ಡೆಲ್ಲಿಯಿಂದ ಬಂದು ಪ್ರೊಡಕ್ಷನ್ ಸೆಂಟರ್ಸ್‌ಗೆ ಹೋಗಿ ನೋಡಿ ಬಂದು ನಮ್ಮ ರಾಜ್ಯಕ್ಕೆ ಮಾತ್ರವಲ್ಲ, ಇಲಾಖೆಗೂ ಅಭಿನಂದನೆ ಸಲ್ಲಿಸಿ ಹೋಗಿದ್ದಾರೆ. ಅದಕ್ಕಾಗಿ ಸನ್ಮಾನ್ಯ ಸದಸ್ಯರಾದ ಪೆರಿಕಲ್ ಮಲ್ಲಪ್ಪನವರಿಗೆ ಎರಡು ಮೂರು ಪ್ರೊಡಕ್ಷನ್ ಸೆಂಟರ್‌ಗಳ ಅಡ್ರಸ್ ಕೊಡುತ್ತೇನೆ. ನಮ್ಮ ಅಧಿಕಾರಿಗಳ ಜೊತೆ ಕಳುಹಿಸಿಕೊಡುತ್ತೇನೆ. ಅವರು ಹೋಗಿ ನೋಡಿಕೊಂಡು ಬಂದು ನಂತರ ಇದನ್ನು ಪ್ರಸ್ತಾಪ ಮಾಡಲಿ.

ವಿಷಯ:- ಸೇಡಂ ನ ಸಾರ್ವಜನಿಕ ಆಸ್ಪತ್ರೆ ಬಗ್ಗೆ .

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 475 (2319)

ಶ್ರೀ ಬಸಂತರೆಡ್ಡಿವೋತಕಪಲ್ಲಿ (ಸೇಡಂ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಹಳೆ ಸಾರ್ವಜನಿಕ ಆಸ್ಪತ್ರೆಯ ಶೌಚಾಲಯ ಸುತ್ತುಗೋಡೆ (ಕಾಂಪೌಂಡ್‌ವಾಲ್)ಇತ್ಯಾದಿ ಬಿದ್ದು ಹೋಗಿ ರೋಗಿಗಳಿಗೆ ತೊಂದರೆಯುಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ ಶೌಚಾಲಯ ಇಲ್ಲದ ಕಾರಣ, ಆಸ್ಪತ್ರೆಯ ಸುತ್ತಮುತ್ತಲೂ ಮಲ ಮೂತ್ರ ವಿಸರ್ಜಿಸುವುದರಿಂದ ಮಲಿನವಾಗಿ ರೋಗಿಗಳ ರೋಗ ಹರಡಿ ಹೆಚ್ಚಾಗುವುದಿಲ್ಲವೆ?

ಇ ಸುತ್ತುಗೋಡೆ ಬಿದ್ದು ಹೋದ ಕಾರಣ, ದನಕರುಗಳು, ಹಂದಿಗಳು, ಇನ್ನಿತರ ಪ್ರಾಣಿಗಳು ಆಸ್ಪತ್ರೆ ಆವರಣದಲ್ಲಿ ನುಗ್ಗಿ, ಬಂದು ತೊಂದರೆಯಾಗುವುದು ನಿಜವಲ್ಲವೇ ?

ಈ ಇವುಗಳನ್ನು ದುರಸ್ತಿ ಮಾಡಿಸಿ, ರೋಗಿಗಳಿಗೆ ಸ್ವಚ್ಛತೆ ಪರಿಸರ ನಿರ್ಮಿಸುವುದು ಯಾವಾಗ?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಹೌದು.

ಆ ಹೌದು, ಆದರೆ ರೋಗಿಗಳ ರೋಗ ಹೆಚ್ಚಾಗಿಲ್ಲ.

ಇ ಹೌದು.

ಈ ರಿಪೇರಿಗಾಗಿ ಬಂದ ಅಂದಾಜು ಪಟ್ಟಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮೇಲು ರುಜು ಹಾಕಿ ಜಿಲ್ಲಾ ಪರಿಷತ್ತಿನ ಕಾರ್ಯಪಾಲಕ ಅಭಿಯಂತರಿಗೆ ಕಾಮಗಾರಿಯನ್ನು ಕೈಗೊಳ್ಳಲು ಕಳುಹಿಸಲಾಗಿದೆ.

ಶ್ರೀ ಬಸಂತರೆಡ್ಡಿ ಮೋತಕಪಲ್ಲಿ:- 'ಆ' ಪ್ರಶ್ನೆಯಲ್ಲಿ ಶೌಚಾಲಯ ಇಲ್ಲದ ಕಾರಣ ಆಸ್ಪತ್ರೆಯ ಸುತ್ತಮುತ್ತಲೂ ಮಲಮೂತ್ರ ವಿಸರ್ಜಿಸುವುದರಿಂದ ಮಲಿನವಾಗಿ ರೋಗಿಗಳ ರೋಗ ಹರಡಿ ಹೆಚ್ಚಾಗುವುದಿಲ್ಲವೇ ಎಂದು ಕೇಳಿದ್ದಕ್ಕೆ ಹೌದು ಆದರೆ ರೋಗಿಗಳ ರೋಗ ಹೆಚ್ಚಾಗಿಲ್ಲ ಎಂದು ತಿಳಿಸಿದ್ದಾರೆ. ಆದರ ಅರ್ಥ ಇಂಥ ಮಲಮೂತ್ರ, ಹೊಲಸು, ದುರ್ವಾಸನೆಯಿಂದ ರೋಗಿಗಳು ಆರೋಗ್ಯವಂತರಾಗುವುದು ಮಾನ್ಯ ಮಂತ್ರಿಗಳು ಒಪ್ಪಬಹುದೆ ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಇರುವ ಪರಿಸ್ಥಿತಿಯನ್ನು ಲಿಖಿತ ಮೂಲಕ ಸದಸ್ಯರಿಗೆ ಕಳಿಸಿದ್ದೇನೆ. ಸೇಡಂ ಆಸ್ಪತ್ರೆಯಲ್ಲಿ ಕಾಂಪೌಂಡ್ ಇಲ್ಲದೇ ಇರುವುದು ನಿಜ. ಹಾಗಿರುವುದರಿಂದ ದನಕರುಗಳ ಮಲಮೂತ್ರ ವಿಸರ್ಜನೆಯಾಗಿ ವಾಸನೆ ಇರುವುದು ನಿಜ. ಈಗ ಜಿಲ್ಲಾ ಪರಿಷತ್ತಿನವರು ಕಾಂಪೌಂಡ್ ಹಾಕುವುದಕ್ಕೋಸ್ಕರ 2 ಲಕ್ಷ ರೂಪಾಯಿಗಳ ಅಂದಾಜು ತಯಾರು ಮಾಡಿ ನಮ್ಮ ಇಲಾಖೆಗೆ ಕಳುಹಿಸಿದ್ದಾರೆ. ನಾವು ಅದಕ್ಕೆ ಕೌಂಟರ್ ಸಿಗ್ನೇಚರ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಅವರು ಆ ಕೆಲಸವನ್ನು ಮಾಡುವ ಹಂತದಲ್ಲಿದ್ದಾರೆ. ಮತ್ತೊಂದು ವಿಷಯ ಹೇಳುವುದಾದರೆ, ಈ ಆಸ್ಪತ್ರೆಯನ್ನೇ ಹೊಸದಾಗಿ ಕಟ್ಟಿರುವ ಆಸ್ಪತ್ರೆಗೆ ವರ್ಗಾಯಿಸುವ ಪ್ರಸ್ತಾವನೆ ಕೂಡ ಇದೆ. ಅದು ಶೀಘ್ರದಲ್ಲೇ ಮುಗಿಯುವ ಹಂತದಲ್ಲಿದೆ. ಅದು ಮುಗಿದ ತಕ್ಷಣ ಆಸ್ಪತ್ರೆಯನ್ನು ಅಲ್ಲಿಗೆ ವರ್ಗಾಯಿಸಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:-ಹೊಸದಾಗಿ ಕಟ್ಟಿರುವುದು 25 ಬೆಡ್ ಆಸ್ಪತ್ರೆ. ಇದು 25 ಬೆಡ್ ಆಸ್ಪತ್ರೆ. ಎರಡೂ ಆಸ್ಪತ್ರೆ ಇರುತ್ತದೆ. ಈ ಆಸ್ಪತ್ರೆ ವರ್ಗಾವಣೆ ಆಗುವುದಿಲ್ಲ. ಆದರೂ ಸಹ ತಾವು ಇದರಲ್ಲಿ ರೋಗಿಗಳ ರೋಗ ಹೆಚ್ಚಾಗಿಲ್ಲ ಎಂದು ಹೇಳಿದ್ದೀರಿ. ಇದರಿಂದ ರೋಗಿಗಳ ರೋಗವು ಹೆಚ್ಚಾಗುವುದಿಲ್ಲವೇ ?

ಛೇರ್ಮನ್:- ಈಗ ನಿಮಗೆ ಏನು ಅನುಕೂಲವಾಗಬೇಕೆಂದು ಪ್ರಶ್ನೆ ಕೇಳಿ.

ಶ್ರೀ ಬಸಂತರೆಡ್ಡಿ ಮೋತಕಪಲ್ಲಿ:- ಈ ಪ್ರಶ್ನೆಗೆ ಉತ್ತರವಾಗಿ" ರಿಪೇರಿಗಾಗಿ ಬಂದ ಅಂದಾಜು ಪಟ್ಟಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮೇಲು ರುಜು ಹಾಕಿ ಜಿಲ್ಲಾ ಪರಿಷತ್ತಿನ ಕಾರ್ಯಪಾಲಕ ಅಭಿಯಂತರರಿಗೆ ಕಾಮಗಾರಿಯನ್ನು ಕೈಗೊಳ್ಳಲು ಕಳುಹಿಸಲಾಗಿದೆ ". ಎಂದು ತಿಳಿಸಿದ್ದೀರಿ. ಇದರ ಬಗ್ಗೆ ನಾನು ಒಂದೆರಡು ವರ್ಷಗಳಿಂದ ಪತ್ರವ್ಯವಹಾರ ಮಾಡಿದ್ದೇನೆ. ಮತ್ತೆ ರಿಪೇರಿಗಾಗಿ ಅಂದಾಜನ್ನು ಸಹಾ ಕಳುಹಿಸಿ ಒಂದು ವರ್ಷವಾಗಿದೆ. ಆದರೂ ಇಲ್ಲಿಯವರೆವಿಗೂ ಈ ವ್ಯವಸ್ಥೆ ಆಗಿಲ್ಲ. ಇದರಿಂದಾಗಿ ರೋಗಿಗಳಿಗೆ ಬಹಳ ತೊಂದರೆಯಾಗಿದೆ. ರೋಗಿಗಳ ಆರೋಗ್ಯವನ್ನು ಕಾಪಾಡಲು ತೀವ್ರವಾಗಿ ಶೌಚಾಲಯ ಮತ್ತು ಸುತ್ತುಗೋಡೆಯನ್ನು ಕಟ್ಟಲು ವ್ಯವಸ್ಥೆ ಮಾಡಬಹುದೇ ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೇ, ಸೂಕ್ತ ನಿರ್ದೇಶನದೊಂದಿಗೆ ಜಿಲ್ಲಾಪರಿಷತ್ತಿನವರಿಗೆ ಶೌಚಾಲಯ ನಿರ್ಮಾಣ ಮಾಡತಕ್ಕ ಮತ್ತು ಕಾಂಪೌಂಡ್ ಹಾಕುವುದಕ್ಕೆ ಸ್ಪಷ್ಟ ನಿರ್ದೇಶನ ಕೊಡಲಾಗುತ್ತದೆ.

ವಿಷಯ:- ವೈದ್ಯಾಧಿಕಾರಿಗಳ ವೇತನದಲ್ಲಿ ತಾರತಮ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 476 (2334)

ಶ್ರೀ ಜಿ.ಎಸ್.ಆಚಾರ್ (ಬೈಂದೂರು)ರವರ ಪರವಾಗಿ ಶ್ರೀ ಬಸವರಾಜ್ (ಬ್ರಹ್ಮಾವರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಆಸ್ಪತ್ರೆಗಳು ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟು ಅನೇಕ ವರ್ಷಗಳಾಗಿದ್ದರೂ ಅವುಗಳ ವೈದ್ಯಾಧಿಕಾರಿಗಳ ಸೇವೆ ಸರ್ಕಾರಕ್ಕೆ ಸೇರ್ಪಡೆಯಾಗಿದ್ದರೂ ಅವರುಗಳ